ಸುಮಾರು 3 ಕಿ.ಮೀ. ಕಾಡಾನೆ ನಿರೋಧಕ ಕಂದಕಗಳನ್ನು ನಿರ್ಮಿಸಿ, ಕಾಡಾನೆಗಳ ಹಾವಳಿ ಇರುವ ಸ್ಥಳಗಳಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲಾಗಿದೆ.

ದಾಳಿ ಮಾಡುವ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಹಾವಳಿ ಮಾಡುವ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ 14 ಶಿಬಿರಗಳನ್ನು ಸ್ಥಾಪಿಸಿ, ಕಾರ್ಯಾಚರಣೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆಗಾಗಿ ವಾಕಿ–ಟಾಕಿ, ವಾಹನ ಸೌಲಭ್ಯ, ಪಟಾಕಿ–ಸಿಡಿಮದ್ದು ಇತರೆ ಸಾಮಗ್ರಿಗಳನ್ನು ಒದಗಿಸಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಮಾನವ ಹತ್ಯೆ ಮಾಡುವಂತಹ ಪುಂಡಾನೆಗಳನ್ನು ಗುರುತಿಸಿ, 2005–06ರಲ್ಲಿ 02, 2006–07ರಲ್ಲಿ 01, 2007–08ರಲ್ಲಿ 03, 2009–10ರಲ್ಲಿ 02 ಹಾಗೂ 2010–11ರಲ್ಲಿ 03 ಪುಂಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲಾಗಿದೆ. ಹೀಗೆ ಸ್ಥಳೀಯರ ಸಹಕಾರದೊಂದಿಗೆ, ಇಲಾಖೆ ಮುಂಚೂಣಿ ಸಿಬ್ಬಂದಿ ಹಾಗೂ ಹಿರಿಯ ಅಧಿಕಾರಿಗಳೆಲ್ಲರೂ ಒಳಗೊಂಡಂತೆ ಸ್ಥಳದಲ್ಲಿ ಮೊಕ್ಕಾಂ ಮಾಡಿ, ತುರ್ತು ಅಗತ್ಯ ಕ್ರಮಗಳನ್ನು ಸಕಾಲದಲ್ಲಿ ಕೈಗೊಂಡು ಆನೆ ಹಾವಳಿ ತಡೆಯುವ ಕಾರ್ಯ ಕೈಗೊಳ್ಳಲಾಗುತ್ತಿದೆ.

ಉ) ಹೌದು.

ಬೆಳೆಹಾನಿ ಕಾಮಗಾರಿ

330 (667) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09, 2009–10 ಮತ್ತು 2010–11ನೇ ಸಾಲುಗಳಲ್ಲಿ ಹಾಸನ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಉಂಟಾದ ಬೆಳೆ ಹಾನಿ ಸಾರ್ವಜನಿಕ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; (ಕ್ಷೇತ್ರವಾರು ಅನುದಾನವನ್ನು ಬಿಡುಗಡೆ ಮಾಡುತ್ತಿರುವ ಮಾಹಿತಿ ನೀಡುವುದು);

ಆ) ಅನುದಾನ ಬಿಡುಗಡೆ ಮಾಡಲು ಪಾಲಿಸುವ ನಿಯಮಗಳೇನು; (ಮಾಹಿತಿ ನೀಡುವುದು)?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಈ ಕೆಳಕಂಡಂತೆ ಅನುದಾನವನ್ನು ಸಾರ್ವಜನಿಕ ಕಾಮಗಾರಿಗಳಿಗೆ ಬಿಡುಗಡೆ ಮಾಡಿದೆ.

(ರೂ. ಲಕ್ಷಗಳಲ್ಲಿ)

ಕ್ರ.ಸ.	ವಿ.ಸ. ಕ್ಷೇತ್ರ	2008–09	2009–10	2010–11
1	ಅರಸೀಕೆರೆ	17.00	53.30	25.00
2	ಅರಕಲಗೂಡು	16.66	43.00	42.95
3	ಬೇಲೂರು	26.67	53.20	40.00
4	ಹಾಸನ	72.74	158.55	34.00
5	ಶ್ರವಣಬೆಳಗೊಳ	07.00	32.00	25.00
6	ಹೊಳೆನರಸೀಪುರ	16.92	26.80	85.00
7	ಸಕಲೇಶಪುರ	43.00	38.30	59.89
	ಒಟ್ಟು	**199.99**	**405.15**	**311.84**

ಈ ಕೆಳಕಂಡಂತೆ ಅನುದಾನವನ್ನು ಬೆಳೆಹಾನಿ, ಜೀವಹಾನಿ ಮತ್ತು ಮನೆ ಹಾನಿಗೆ ಬಿಡುಗಡೆ ಮಾಡಿದೆ

(ರೂ. ಲಕ್ಷಗಳಲ್ಲಿ)

ಕ್ರ.ಸ.	ವಿ.ಸ. ಕ್ಷೇತ್ರ	2008–09	2009–10	2010–11
1	ಅರಸೀಕೆರೆ	81.30	05.00	05.00
2	ಅರಕಲಗೂಡು	115.11	12.00	05.00
3	ಬೇಲೂರು	132.68	20.00	---
4	ಹಾಸನ	538.67	10.00	0.5.00
5	ಚನ್ನರಾಯಪಟ್ಟಣ	44.38	10.00	---
6	ಹೊಳೆನರಸೀಪುರ	77.77	05.00	---
7	ಸಕಲೇಶಪುರ	---	05.00	---
8	ಆಲೂರು	20.85	05.00	---
	ಒಟ್ಟು	**1010.76**	**72.00**	**15.00**

ಆ) ಪ್ರಕೃತಿ ವಿಕೋಪ ಪರಿಹಾರ ಮಾರ್ಗಸೂಚಿಗಳನ್ವಯ ಜಿಲ್ಲಾಧಿಕಾರಿಗಳ ಬೇಡಿಕೆಯನ್ನು ಅನುಸರಿಸಿ, ಸರ್ಕಾರದ ಮಟ್ಟದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ರಚಿತವಾದ ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಅನುದಾನ ಬಿಡುಗಡೆ ಮಾಡಲಾಗುವುದು.

ತಾಲ್ಲೂಕು ಮಟ್ಟದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯಲ್ಲಿ ನಿರ್ಣಯಿಸಿದಂತೆ ಅನುದಾನ ಬಿಡುಗಡೆ ಮಾಡಲಾಗುವುದು.

ಉಡುಪಿ ಸಬ್‌ರಿಜಿಸ್ಟ್ರಾರ್ ಕಛೇರಿ

331 (790) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ವಾರ್ಷಿಕ ಒಟ್ಟು ಎಷ್ಟು ಜಾಗದ ದಾಖಲಾತಿಗಳ ನೋಂದಣಿ ನಡೆಯುವುದು ಹಾಗೂ ಒಟ್ಟು ವಾರ್ಷಿಕ ವರಮಾನ ಎಷ್ಟು; (ಸರಾಸರಿ ವಿವರ ನೀಡುವುದು)

ಆ) ಸದರಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಮೂಲಭೂತ ಸೌಲಭ್ಯದ ಕೊರತೆ ನಿವಾರಣೆಗೆ ಹಾಗೂ ಹೊಸ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; (ವಿವರ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಉಡುಪಿ ಉಪ ನೋಂದಣಿ ಕಛೇರಿಯಲ್ಲಿ 2005–06ರಿಂದ 2010–11 (ಜನವರಿ 2011ರವರೆಗೆ) 6 ವರ್ಷಗಳಲ್ಲಿ ನೋಂದಣಿಯಾದ ಒಟ್ಟು ದಸ್ತಾವೇಜುಗಳು 59367.

ವರ್ಷ	ದಸ್ತಾವೇಜುಗಳ ಸಂಖ್ಯೆ	ಮುದ್ರಾಂಕ ಶುಲ್ಕ	ನೋಂದಣಿ ಶುಲ್ಕ	ಒಟ್ಟು (ರೂ. ಕೋಟಿಗಳಲ್ಲಿ)
2005–06	6286	9.27	1.43	10.70
2006–07	6855	12.72	1.86	14.58
2007–08	7752	17.04	2.38	19.42
2008–09	7563	17.65	2.61	20.26
2009–10	8808	18.79	3.42	22.21
2010–11	22103	30.82	5.68	36.50
ಒಟ್ಟು	**59367**	**106.29**	**17.38**	**126.67**

ಆ) ಉಡುಪಿ ಉಪ ನೋಂದಣಿ ಕಛೇರಿಯು ಪ್ರಸ್ತುತ ಸರಕಾರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಹೊಸದಾಗಿ ಉಡುಪಿ ಉಪ ನೋಂದಣಿ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ